**<u>ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ.ಎಂ.ಬಿ., ಪ್ರತಿವಾದಿ ಪರ ವಕೀಲರಿಂದಃ</u>**

**12.** ಅಗ್ರಿಮೆಂಟ ಯಾವಾಗ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಮೊದಲಬಾರಿಗೆ ಅಗ್ರಿಮೆಂಟ ಮಾಡಿಕೊಟ್ಟಾಗ ಸಬ್ ರಜಿಸ್ಟರ ಕಛೇರಿಯಲ್ಲಿ ನೋಡಿರುತ್ತೇನೆ. ಸದ್ರಿ ಅಗ್ರಿಮೆಂಟ ನೋಂದಾವಣಿ ಮಾಡಲು ಸ್ಟಾಂಪ ಡ್ಯೂಟಿ ನಾನೇ ಕೊಟ್ಟಿರುತ್ತೇನೆ. ಎಷ್ಟು ಹಣ ಕೊಟ್ಟಿರುತ್ತೇನೆ ಎಂದು ಗೊತ್ತಿಲ್ಲ,ದಿನಾಂಕಃ 16-03-2020 ರಂದು ಕೊಟ್ಟಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದ್ರಿ ದಾಖಲೆಯಲ್ಲಿ ಹಣದ ಪಾವತಿಯ ವಿವರದಲ್ಲಿ ನಮೂದಿಸಿರುವ ಚಲನ ನಂಬರ ಮತ್ತು ದಿನಾಂಕ ಹಾಗೂ ನಿಪಿ-7 ರಲ್ಲಿ ಹಣದ ಪಾವತಿ ವಿವರ ಎಂಬುವಲ್ಲಿ ನಮೂದಿಸಿರುವ ಚಲನ ಸಂಖ್ಯೆ ಮತ್ತು ದಿನಾಂಕ ಒಂದೇ ಇದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ತೋರಿಸಲಾದ ಸದ್ರಿ ದಾಖಲೆಯು ಹಣ ಪಾವತಿ ಮಾಡಿದ ಚಲನ ನಕಲು ಪ್ರತಿ ಆಗಿರುತ್ತದೆ. ಆದ್ದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ಸದ್ರಿ ಚಲನ ಚೇತನ ಎಂ ಓಲೇಕಾರ ಎನ್ನುವವರ ಹೆಸರಿನಲ್ಲಿ ಜನರೇಟ್ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದ್ರಿ ಚೇತನ ಓಲೇಕಾರವರು ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಿನಾಂಕಃ 19-02-2020 ರಂದು ಪ್ರತಿವಾದಿಯ ಸಹೋದರಿ ಅಗ್ರಿಮೆಂಟ ಮಾಡಿಕೊಟ್ಟಿರುತ್ತಾರೆ ಎಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಅಗ್ರಿಮೆಂಟ ಆದ ಕಾಲಕ್ಕೆ ಹಾಜರಿದ್ದೆ ಎಂದರೆ ಸಾಕ್ಷಿಯು ಇಲ್ಲಾ ನನಗೆ ಸದ್ರಿ ಅಗ್ರಿಮೆಂಟ ಆದ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**13.** ನನ್ನ ಅಗ್ರಿಮೆಂಟಗೆ ಸಾಕ್ಷಿದಾರರಾಗಿ ಶಂಕ್ರಪ್ಪ ಅರಗಂಜಿ, ಅಶೋಕ ಪಟ್ಟಣ್ಣನವರ ಮತ್ತು ಸಂಜನಾ ದಳವಾಯಿರವರ ಗಂಡ ಸಹಿ ಮಾಡಿರುತ್ತಾರೆ. ಶಂಕ್ರಪ್ಪ ಅರಗಂಜಿ ಮತ್ತು ಅಶೋಕ ಪಟ್ಟಣ್ಣನವರ ಇವರೇ ಇಬ್ಬರೂ ಚೇತನ ಎಂ ಓಲೇಕಾರವರ ಅಗ್ರಿಮೆಂಟಗೂ

ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಂಕ್ರಪ್ಪ ಅರಗಂಜಿಯವರು ಸಾಕಷ್ಟು ಪ್ರಕರಣಗಳಲ್ಲಿ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲಾ ಎಂದು ನುಡಿಯುತ್ತಾರೆ. ಶಂಕ್ರಪ್ಪ ಅರಗಂಜಿಯವರು ರೈತರಿಗೆ ಮತ್ತು ಅನಕ್ಷರಸ್ತರಿಗೆ ದಣಿಗಳಿಂದ ಸಾಲದ ಹಣ ಕೊಡಿಸುವುದು ಮತ್ತು ಖೊಟ್ಟಿ ದಾಖಲೆಗಳನ್ನು ಸೃಷ್ಠಿ ಮಾಡಿ ದಾವೆ ಮಾಡಿಸುವುದು, ಮಾಡಿಕೊಂಡು ಬರುವುದೇ ಅವರ ಪ್ರವೃತ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**14.** ನಾನು ಮತ್ತು ಚೇತನ ಓಲೇಕಾರರವರು ಒಬ್ಬರಿಗೊಬ್ಬರು ಮಿಲಾಫೆಯಾಗಿ ಪರವಾನಿಗೆ ಇಲ್ಲದೇ ಬಡ್ಡಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. ನಾವು ಬಡರೈತರಿಗೆ ಸ್ವಲ್ಪ ಹಣ ಕೊಟ್ಟು ಅವರಿಂದ ದಾಖಲೆ ಬರೆಯಿಸಿಕೊಂಡು ಆಸ್ತಿಯನ್ನು ಎತ್ತಿ ಹಾಕುವ ಸಲುವಾಗಿ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡ ಮತ್ತು ಆತನ ಸಹೋದರ ಪ್ರಕಾಶ ದಳವಾಯಿ ನನಗೆ ಗೊತ್ತಿರುವವರು ಎಂದರೆ ಸರಿಯಲ್ಲ. ಸದ್ರಿಯವರಿಗೆ ಬೀಜ ಗೊಬ್ಬರ ಕೊಂಡುಕೊಳ್ಳಲು ಹಣದ ಅವಶ್ಯಕತೆ ಇದ್ದುದ್ದಕ್ಕೆ ನಾನು ಅವರಿಬ್ಬರಿಗೂ ತಲಾ 5 ಲಕ್ಷ ರೂಪಾಯಿಗಳನ್ನು ಕೊಟ್ಟು ಅವರಿಂದ ತೋರುಗಾಣಿಕೆ ಅಗ್ರಿಮೆಂಟನ್ನು ಭದ್ರತೆಯ ಸಲುವಾಗಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹಣವನ್ನು ಪ್ರತಿವಾದಿಯ ಗಂಡನಿಗೆ ಬಡ್ಡಿಯ ಸಲುವಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹಣ ಮತ್ತು ಬಡ್ಡಿ ಮರು ಪಾವತಿಯಾದ ಮೇಲೆ ಅಗ್ರಿಮೆಂಟನ್ನು ನೋಂದಾಯಿತ ಕಾಗದ ಪತ್ರದ ಮೂಲಕ ರದ್ದು ಮಾಡಬೇಕೆಂದು ಮಾತು ಕತೆಯಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡ ಸದ್ರಿ 5 ಲಕ್ಷ ಹಣವನ್ನು ಬಡ್ಡಿ ಸಹಿತ ಮರುಪಾವತಿ ಮಾಡಿದ್ದು,ನಾನು ಅಗ್ರಿಮೆಂಟ ರದ್ದತಿ ಪತ್ರವನ್ನು ಇವತ್ತು ಮಾಡಿಕೊಡುತ್ತೇನೆ, ನಾಳೆ ಮಾಡಿಕೊಡುತ್ತೇನೆ ಎಂದು ಹೇಳುತ್ತಾ ಬಂದಿದ್ದು, ರದ್ದತಿ ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸಾಕ್ಷಿಯು ನಾನು 5 ಲಕ್ಷ ಹಣವನ್ನು ಅವರಿಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ಪಿ.ಡಬ್ಲ್ಯೂ-1

15. ನಾನು ಹೇಳಿದ ಪ್ರಕಾರ ಮುಂಗಡ ಹಣವನ್ನು ಕೊಟ್ಟಿಲ್ಲ ಮತ್ತು ಸಂಚಕಾರ ಪತ್ರ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಕರಾರು ಪತ್ರ ಹಣದ ಭದ್ರತೆಗಾಗಿ ಮಾಡಿಕೊಟ್ಟಂತಹ ಕರಾರು ಪತ್ರವಾಗಿದ್ದು, ಹಣ ಮರುಪಾವತಿಯಾಗುವವರೆಗೆ ಮಾತ್ರ ಸದ್ರಿ ಕರಾರು ಪತ್ರ ಮಾಡಿಕೊಟ್ಟದ್ದಾಗಿರುತ್ತದೆ ಎಂದರೆ ಸಾಕ್ಷಿಯು ಸದ್ರಿ ಕರಾರು ಪತ್ರ ನಾನು ಜಮೀನನ್ನು ಖರೀದಿ ಮಾಡಿದ ಬಗ್ಗೆ ಮಾಡಿಕೊಟ್ಟಂತದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು 04 ವರ್ಷ ಪ್ರತಿವಾದಿಗೆ ಸತಾಯಿಸಿ ಆಸ್ತಿ ಎತ್ತಿ ಹಾಕಬೇಕೆಂಬ ಉದ್ದೇಶದಿಂದ ಮುದ್ದತ್ತಬಾಹಿರ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತನ್ನ ತಾಯಿಯ ಮನೆಯಿಂದ ಹಿಸ್ಸೆ ಎಂದು ಬಂದಂತಹ ಒಂದೇ ಆಸ್ತಿಯಾಗಿದ್ದು ಅದು ಅವರ ಜೀವನಾಧಾರವಾಗಿದ್ದು, ಅವರು ಕೃಷಿಕರಿದ್ದು ಅವರಿಗೆ ಅದನ್ನು ಹೊರತು ಪಡಿಸಿ ಬೇರೆ ಆಸ್ತಿ ಇಲ್ಲಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.